ಸಮುದ್ರ ಮಥನ




**ಸಕಾಲಿಕ ಲೇಖನ**

'ಅಡ್ಮಿಷನ್ ಆಯ್ತಾ?', ಡಾ.ವಿನತೆ ಶರ್ಮ ಅವರ ಮುಖಪುಟ ಲೇಖನ (ಸುಧಾ, ಮಾ.16) ಸಕಾಲಿಕ. ವರ್ಷ ಕಳೆಯಿತೆಂದರೆ ಪೋಷಕರಿಗೆ ಶಾಲಾ ಪ್ರವೇಶದ ಆತಂಕ ಎದುರಾಗುತ್ತದೆ. ರಾತ್ರಿಯೆಲ್ಲ ಶಾಲೆಯ ಮುಂದೆ ಸರದಿ ಸಾಲಿನಲ್ಲಿ ನಿಂತು ಪ್ರವೇಶದ ಅರ್ಜಿಗಳನ್ನು ಪಡೆದು ಹಾಕುವಾಗ ಅನುಭವಿಸುವ ಆತಂಕವನ್ನು ವರ್ಣಿಸಲಸಾಧ್ಯ.

ಗ್ರಾಮೀಣ ಮಕ್ಕಳ ಪ್ರವೇಶದಲ್ಲಿಯೂ ಇರುವ ಹಲವು ಗೊಂದಲಗಳ ಬಗ್ಗೆಯೂ ಲೇಖಕಿ ಬೆಳಕು ಚೆಲ್ಲಿದ್ದರೆ ಚೆನ್ನಾಗಿರುತ್ತಿತ್ತು. ಮಕ್ಕಳಿಗೆ ಉಚಿತ ಶಿಕ್ಷಣ ನೀಡಬೇಕೆನ್ನುವ ಸರ್ಕಾರವೇ ದುಬಾರಿ ಶುಲ್ಕ ವಿಧಿಸುವ ಖಾಸಗಿ ಇಂಟರ್ ನ್ಯಾಷನಲ್ ಶಾಲೆಗಳ ಪ್ರಾರಂಭಕ್ಕೆ ಅನುಮತಿ ನೀಡುವುದು ವಿಪರ್ಯಾಸ. ಈ ದುಬಾರಿ ಶಾಲೆಗಳ ಆಡಳಿತ ರಾಜಕಾರಣಿಗಳ ಕೈಯಲ್ಲಿರುವುದೂ ಒಂದು ದುರಂತ.

– ಕೊ.ಸು.ನರಸಿಂಹ ಮೂರ್ತಿ ಮೈಸೂರು, ಶ್ರೀನಾಥ್ ಕೊನೇಟಿ ಬೆಂಗಳೂರು, ಎಚ್.ಆನಂದಕುಮಾರ್ ಚಿತ್ರದುರ್ಗ, ಸು.ವಿಜಯಲಕ್ಷ್ಮಿ ಶಿವಮೊಗ್ಗ, ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ, ಬಂಟ್ವಾಳ ಸೂರ್ಯನಾರಾಯಣರಾವ್ ಬೆಂಗಳೂರು, ಮಹಾವೀರ ಕಾಸರ ಶಿವಮೊಗ್ಗ, ರಮ್ಯಾ ಬೆಳ್ಳಾವೆ, ಗಾಣಧಾಳು ರಾಮಣ್ಣ ಚಿತ್ರದುರ್ಗ

**ಸೂಕ್ತ ವಿಶ್ಲೇಷಣೆ**

'ನಿಮ್ಮೊಡನೆ' ಯಲ್ಲಿ 'ಹೆರಿಗೆ ಹೆಸರಿನಲ್ಲಿ ಸುಲಿಗೆ' (ಬಿ.ಎಂ. ಹನೀಫ್) ಬರಹದಲ್ಲಿ ಇಂದಿನ ಪರಿಸ್ಥಿತಿಯನ್ನು ಸೂಕ್ತವಾಗಿ ವಿಶ್ಲೇಷಿಸಿದ್ದಾರೆ. ನಗರಗಳಲ್ಲಿ ಅನಗತ್ಯ ಸಿಸೇರಿಯನ್ ಹಾವಳಿ ವಿಪರೀತವಾಗಿದೆ. ಇದು ಹಣ ಮಾಡುವ ದಂಧೆ ಎಂದು ಲೇಖಕರು ಹೇಳಿರುವುದು ಸರಿಯಾಗಿಯೇ ಇದೆ. ಜತೆಗೆ ಇಂದು ಕೆಲ ಉದ್ಯೋಗಸ್ಥ ಮಹಿಳೆಯರು ಸ್ವತಃ ಅವರೇ ಸಿಸೇರಿಯನ್ ಮಾಡುವಂತೆ ಮೊರೆ ಹೋಗುವುದು ವಿಪರ್ಯಾಸ.

–ಮಧುರಾ ಸುಬ್ರಹ್ಮಣ್ಣ ಬೆಂಗಳೂರು, ಬಿ.ಎಸ್.ಎನ್.ರಾವ್ ಬೆಂಗಳೂರು

**ಏಕಮುಖವಾಗಿದೆ**

ಸಿಸೇರಿಯನ್ ಬಗೆಗಿನ ಬರಹ ಸಕಾಲಿಕವಾದರೂ ಏಕಮುಖವಾಗಿದೆ. 'ಸಿಸೇರಿಯನ್ ಹಿಂದಿಗಿಂತ ಇಂದು ಹೆಚ್ಚಾಗಿದೆ' ಎನ್ನುವುದು ತೇಲುವ ಮಂಜುಗಡ್ಡೆಯ ತುದಿ ಮಾತ್ರ ಗೋಚರವಾದಂತೆ. ಕಾರಣ ಇದು ವೈದ್ಯರಿಗೆ ಮಾತ್ರ ಸಂಬಂಧಿಸಿದ್ದಲ್ಲ. ಹೆರಿಗೆ ನೋವಿಗೆ ಹೆದರುವ ಹೆಣ್ಣು ಮಕ್ಕಳು, ತಮ್ಮ ಮಗು ಇಂಥ ದಿನವೇ ಜನಿಸಬೇಕು ಎಂದು ಮಗುವಿನ ಜನ್ಮ ಕುಂಡಲಿ ನಿರ್ಧರಿಸುವ ಅಪ್ಪ ಅಮ್ಮ, ವೈದ್ಯರು ತಮ್ಮ ಕರ್ತವ್ಯ ಮಾಡಿದರೂ 'ಸಿಸೇರಿಯನ್ ಮಾಡದೆ ಮಗು ಸತ್ತು ಹೋಯಿತು'ಎಂದು ದೂರುವ ಸಂಬಂಧಿಕರು ಅನವಶ್ಯಕ ಸಿಸೇರಿಯನ್‌ಗಳನ್ನು ಪ್ರೇರೇಪಿಸುತ್ತಾರೆ. ಒಟ್ಟನಲ್ಲಿ ಇಡೀ ವ್ಯವಸ್ಥೆಯೇ ಅರಿವಿನಿಂದ ಬದಲಾಗಬೇಕಾದ ಅಗತ್ಯ ಇದೆ.

–ಡಾ.ಕೆ.ಎಸ್. ಪವಿತ್ರ ಶಿವಮೊಗ್ಗ

## ಹೊಸ ಅಂಕಣ
## ಸವಿ ಸವಿ ನೆನಪು..

ಬದುಕಿನಲ್ಲಿ ಸಾವಿರ ಸವಿನೆನಪುಗಳಿವೆ. ಅಂತಹ ನೆನಪುಗಳಲ್ಲಿ ಒಂದನ್ನು ಹೆಕ್ಕಿ ತೆಗೆದು ಅಕ್ಷರ ರೂಪಕ್ಕಿಳಿಸಿ. ಅದನ್ನು ಚಿತ್ರಸಮೇತ ನಮಗೆ ಕಳುಹಿಸಿ. ವಿಭಿನ್ನವೆನಿಸಿದ ಬರಹವನ್ನು ಚಿತ್ರ ಸಮೇತ ಎರಡು ವಾರಕ್ಕೊಮ್ಮೆ ಪ್ರಕಟಿಸುತ್ತೇವೆ. (ಸಂ)

**ವಿಚಾರ ಲಹರಿ**

'ಯುವಲೇಖಕರಿಗೆ ಕಿವಿಮಾತು' (ಮೂಚಿ) ವಿಚಾರ ಲಹರಿ ಯುವ ಲೇಖಕರಿಗೆ ದಾರಿದೀಪದಂತಿದೆ.

–ಸುಂದರ್ ಬೆಂಗಳೂರು

**ಈರ್ಷ್ಯೆ ಬೇಡ**

ಮೂಚಿ ಅವರ ಬರಹದಲ್ಲಿ ಕೆಲವು ಮಾತುಗಳು ವೈದಿಕ ಧರ್ಮದ ಬಗ್ಗೆ ಅಜ್ಞಾನದಿಂದ ಕಿಡಿ ಕಾರುವಂತಿದೆ. ಇಂತಹ ಈರ್ಷ್ಯೆ ಬೇಡ.

–ಗೌರಿಬಿದನೂರು ರಂಗಪ್ಪ ಬೆಂಗಳೂರು

**ಚೆನ್ನಾಗಿದೆ**

'ಕ್ರಿಯಾಶಕ್ತಿ ಹೆಚ್ಚಿಸಲು ಇಲ್ಲಿದೆ ಉಪಾಯ' (ಎಸ್.ಜಿ. ಶಿವಶಂಕರ್) ಲೇಖನ ಚೆನ್ನಾಗಿದೆ.

–ನಾರಾಯಣಯಾಜಿ ಶಿರಾಲಿ

**ಪ್ರವಾಸ ಲೇಖನ ಚೆನ್ನಾಗಿದೆ**

'ಗುಹಾಂತರ ದೇಗುಲದ ಹೊಸಗುಡ್ಡ' (ಚಳ್ಳಕೆರೆ ವೀರೇಶ್) ಪ್ರವಾಸ ಲೇಖನ ಓದಿ ಖುಷಿಯಾಯಿತು. ಈ ದೇವಾಲಯಗಳಲ್ಲಿ ಸುಂದರ ಕುಸುರಿ ಕೆಲಸ ಹಳೇಬೀಡು ಬೇಲೂರಿನ ವಾಸ್ತುಶಿಲ್ಪಗಳನ್ನು ನೆನಪಿಸುವಂತೆ ಮಾಡಿತು.

–ಕೊಹಿಮ ಬಸರಕೋಡು, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ

**'ಉಳ್ಳವರಿಗೆ' ಅನುಕೂಲ**

'ಸೆಲೆಬ್ರಿಟಿ' ಅಂಕಣದಲ್ಲಿ 'ಮಲ್ಯ ಬರುವರೆ?' (ಹನಿ) ಓದಿ ಆಶ್ಚರ್ಯ ಹಾಗೂ ಬೇಸರವಾಯಿತು. ಸಾವಿರಾರು ಕೋಟಿ ಸಾಲದ ಹಣವನ್ನು ಬ್ಯಾಂಕಿಗೆ ಮರಳಿಸದೇ ಇದ್ದವರೂ ಸೆಲೆಬ್ರಿಟಿಗಳಾಗುತ್ತಾರೆ. 'ಎಲ್ಲರಿಗೂ ಕಾನೂನು ಒಂದೇ' ಎಂದು ಹೇಳಿದರೂ ಕಾನೂನು 'ಉಳ್ಳವರಿಗೆ' ಮಾತ್ರ ಅನುಕೂಲವಾಗುತ್ತಿದೆ.

–ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ರಾಜಶೇಖರ ಹಾದಿಮನಿ ಧಾರವಾಡ

**ಬಾಸ್ಟನ್ ಸುಂದರ**

'ಬಾಸ್ಟನ್ನಿನ ಮೇಲೆ ಮಂಜು' (ಮಂಜುಳಾರಾಜ್) ಓದಿದಾಗ ನಮಗಿಂತ ಅಲ್ಲಿರುವ ಜನರೇ ಪುಣ್ಯವಂತರು ಎನಿಸಿತು.

–ಬಿ.ಎಸ್. ರಮೇಶ್ ಬೆಂಗಳೂರು



